ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೨೧ನೇ ಆಗಸ್ಟ್ ೧೯೯೫, ಶ್ರಾವಣ, ಶಕ ೧೯೧೭

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ಮಧ್ಯಾಹ್ನ ೧೧.೧೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : (ಶ್ರೀ ಎಂ.ಎಸ್. ಪಾಟೀಲ್) ಅವರು ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆ

ಅಧ್ಯಕ್ಷರು : ಉಪಾಧ್ಯಕ್ಷರು (ಶ್ರೀ ಎಂ.ಎಸ್. ಪಾಟೀಲ್) ಅವರು ಪೀಠವನ್ನು ಅಲಂಕರಿಸಿದ್ದರು.

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡಲ್ಪಟ್ಟು ಮತ್ತೆ ಮೂರು ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ 1 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು.)

(ಸಭೆಯು ಪುನಃ 6.26 ನಿಮಿಷಕ್ಕೆ ಸಮಾವೇಶಗೊಂಡಿತು. ಅಧ್ಯಕ್ಷ ಪೀಠವನ್ನು ಸನ್ಮಾನ್ಯ ಸಭಾಧ್ಯಕ್ಷರು ಅಲಂಕರಿಸಿದರು.)

+ ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಏಕೆಂದರೆ ಒಂದು ಸಾರಿ ಸನ್ಮಾನ್ಯ ಉಪಾಧ್ಯಕ್ಷರು ಕುಳಿತು ಮುಂದೂಡಿದ ಮೇಲೆ ಪ್ರಶ್ನೋತ್ತರ ವೇಳೆ ಲ್ಯಾಪ್ಸ್ ಆಗುತ್ತದೆ ಎಂದು ತಾವು ಭಾವಿಸಿರಬಹುದು. ಆದರೆ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಭೀಕರವಾದ ಬರಗಾಲ ಇರುವಂತಹ ಈ ಸಂದರ್ಭದಲ್ಲಿ ಇವೊತ್ತು ಈ ಸದನ ಪ್ರಾರಂಭವಾದ ತಕ್ಷಣ ಆ ಬಗ್ಗನೇ ಚರ್ಚೆ ಮಾಡಬೇಕು ಎಂದು ತಾವು ಆದೇಶ ಕೊಟ್ಟಿದ್ದಿರಿ. ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲೂ ಕೂಡ ನಾವು ತೀರ್ಮಾನ ಮಾಡಿದ್ದೆವು....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಕೂಡ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ.

ಶ್ರೀ ಬಿ.ಎಸ್ ಯಡಿಯೂರಪ್ಪ : ಈಗಾಗಲೇ ಮಳೆ ಇಲ್ಲದೆ ರೈತರು ಕಂಗಾಲಾಗಿದ್ದಾ. ಕೆರೆ ಕಟ್ಟೆಗಳಲ್ಲಿ ನೀರಿಲ್ಲ, ಕೆರೆಗಳು ಒಣಗುತ್ತಿವೆ. ಇಂತಹ ಸಂದರ್ಭದಲ್ಲಿ....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಅಡ್ಜರ್ನ್‌ಮೆಂಟ್ ಮೋಷನ್ ಮೊದಲು ಕೊಟ್ಟಿದ್ದೇವೆ.....

ಶ್ರೀ ಬಿ.ಎಸ್ ಯಡಿಯೂರಪ್ಪ : ನಾನು ನಿಲುವಳಿ ಸೂಚನೆಯನ್ನು ಸಮಯಕ್ಕೆ ಸರಿಯಾಗಿ ನಿಯಮಾವಳಿಗಳ ಪ್ರಕಾರ ಕಳುಹಿಸಿಕೊಟ್ಟಿದ್ದೇನೆ. ತಾವು ಅದನ್ನು...

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.....

ಶ್ರೀ ಬಿ.ಎಸ್ ಯಡಿಯೂರಪ್ಪ : ತಾವು ಏನು ರೂಲಿಂಗ್ ಕೊಡುತ್ತೀರಿ, ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಸಮಯಕ್ಕೆ ಸರಿಯಾಗಿ ಬೆಳಿಗ್ಗೆ 9.45ರ ಒಳಗಾಗಿ ನಾನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ರಾಜ್ಯದಲ್ಲಿ ಭೀಕರ ಬರಗಾಲ ಇದೆ. ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲೂ ಕೂಡ ಇವ್ಯೊತ್ತು ಇದನ್ನು ತೆಗೆದುಕೊಳ್ಳುವುದು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ನಾಡಿನ ಜನ ಆ ಕಡೆ ಗಮನ ಕೊಡುತ್ತಿರುವ ಈ ಕಾಲದಲ್ಲಿ ಅತ್ಯಂತ ಮಹತ್ವವಾಗಿರುವಂತಹ ಈ ಬರಗಾಲದ ಪರಿಸ್ಥಿತಿಯ ಬಗ್ಗೆ ಚರ್ಚೆ ಆಗಬೇಕು. ಕ್ಯಾಚ್‌ಮೆಂಟ್ ಏರಿಯಾದಲ್ಲಿ ಇವ್ಯೊತ್ತು ಮಳೆ ಇಲ್ಲ, ಜಲಾಶಯಗಳಲ್ಲಿ ನೀರಿಲ್ಲ, ಕೆರೆ ಕಟ್ಟೆಗಳು ಬತ್ತಿ ಹೋಗಿವೆ. ಬೆಳೆದಂತಹ ಬೆಳೆ ಒಣಗಿ ಹೋಗಿದೆ. ರೈತ ಕಂಗಾಲಾಗಿದ್ದಾನೆ. ಅವನ ಬಗ್ಗೆ ಚರ್ಚೆ ಇಲ್ಲಿ ಮಾಡಬೇಡವೇ? ಅದಕ್ಕೆ ನಾವು ಪ್ರಶ್ನೋತ್ತರ ವೇಳೆಯನ್ನು –ಬದಿಗೊತ್ತಿ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಆಕಸ್ಮಾತ್ ಬೇರೆ ವಿಷಯಗಳು ನೀವು ತೆಗೆದುಕೊಳ್ಳುವ ಹಾಗಿದ್ದರೆ ನಾನು ಕಳುಹಿಸಿರುವಂತಹ ನಿಲುವಳಿ ಸೂಚನೆ ಏನಾಗಿದೆ ಅದರ ಬಗ್ಗೆ ತಾವು ಒಂದು ತೀರ್ಮಾನವನ್ನು ಕೊಟ್ಟು ಮುಂದಿನ ಕಾರ್ಯಕಲಾಪಗಳಿಗೆ ಅವಕಾಶ ಮಾಡಿಕೊಡಬೇಕು ಎಂದು ವಿನಂತಿ ಮಾಡುತ್ತೇನೆ ಅಧ್ಯಕ್ಷರೇ.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ ಎಲ್ಲರು ಕುಳಿತುಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್ : ಏತಕ್ಕೆ ತಾವು ಈ ಸಭೆಯನ್ನು ಮುಂದಕ್ಕೆ ಹಾಕಿದ್ದೀರಿ? ಏಕೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕೂಡಿಸಿದ್ದೀರಿ? ನಮಗೆ ಕಾಯುತ್ತಾ ಇರುವಂತಹ ಜನ ಇದ್ದಾರೆ. ನಾವು ರಾಜ್ಯದ ಜನತೆಗೆ ಏನು ಉತ್ತರ ಕೊಡುವುದು, ನಾವು ಏಕೆ ಇಲ್ಲಿ ಶಾಸಕರಾಗಿ ಬಂದಿದ್ದೇವೆ ಇದನ್ನು ತಾವು ದಯವಿಟ್ಟು ಹೇಳಬೇಕಾಗುತ್ತದೆ. ನೀವು ಸುಮ್ಮನೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕೂಡಿಸುವುದರಿಂದ ಏನು ಪ್ರಯೋಜನ? ನಾವು ಯಾವುದಾದರೊಂದು ವಿಷಯದ ಬಗ್ಗೆ ಮಾತನಾಡಬೇಕಾದರೆ ನೀವು ನಮಗೆ ಐದು ನಿಮಿಷ ಟೈಮ್ ಕೊಡುವುದಿಲ್ಲ. ಏಳು ಗಂಟೆಗಳ ಕಾಲ ವ್ಯಯ ಆಗಿದೆ. ಬೇರೆಯವರಿಗೆ ನೀವು ಗಂಟೆಗಟ್ಟಲೆ ಅವಕಾಶವನ್ನು ಕೊಡುತ್ತಿದ್ದೀರಿ, ದಯವಿಟ್ಟು ಇದರ ಬಗ್ಗೆ ತಾವು ಉತ್ತರ ಕೊಡಬೇಕು. ನಿಮ್ಮ ಬಗ್ಗೆ ನನಗೆ ಅನುಮಾನವಿಲ್ಲ, ನಮ್ಮ ಪರಿಸ್ಥಿತಿ ಬಗ್ಗೆ ನಾನು ಹೇಳುತ್ತಿದ್ದೇನೆ. ದಯವಿಟ್ಟು ತಾವು ಇದರ ಬಗ್ಗೆ ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು : ನೀವು ಇದೆಲ್ಲಾ ಗಲಾಟೆ ಮಾಡಬಾರದು ಎಂದು ಹೇಳಿ ನಾನು ಅದಕ್ಕಾಗಿ ಮಧ್ಯಾಹ್ನ ಊಟಕ್ಕೆ ನಿಮ್ಮನ್ನು ಕರೆದುಕೊಂಡು ಹೋಗಿದ್ದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಂದು ನಿಮಿಷ.

ಅಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳಿ ರೆಡ್ಡಿಯವರೆ. ನಿಮಗೆ ಆಮೇಲೆ ಕರೆಯುತ್ತೇನೆ. ಮೊದಲು ಖರ್ಗೆಯವರು ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಬರಗಾಲದ ಬಗ್ಗೆ ವಿರೋಧ ಪಕ್ಷದ ನಾಯಕರು ಎತ್ತುವುದಕ್ಕಿಂತ ಮುಂಚೆಯೇ ನಾವು ತಮ್ಮ ಹತ್ತಿರ ಬಂದು ಭೇಟಿ ಆಗಿ ಅದರ ಬಗ್ಗೆ ಕೊಟ್ಟಿದ್ದೇವೆ. ಈಗಾಗಲೇ ಟೈಮ್ ಮೀರಿದೆ ಎಂದು ಹೇಳಿ ಇವ್ಯೊತ್ತು ಕೂಡ ನಾಳೆ ತೆಗೆದುಕೊಳ್ಳಬೇಕು ಎಂದು ಹೇಳಿ ಮನವಿ ಮಾಡಿಕೊಂಡಿದ್ದೇವೆ. ಏಕೆಂದರೆ ಈ ಸದನ ಸೇರಿದ್ದೇ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಬೇಕು ಎಂದು ಹೇಳಿ. ನಾವು ವಿಶೇಷವಾದಂತಹ

ಮನವಿ ಮಾಡಿಕೊಂಡು ಈ ಅಧಿವೇಶನ ಸೇರಬೇಕು ಎಂದು ಹೇಳಿ ನಾಯಕರ ಹತ್ತಿರ ಕೂಡ ಕೇಳಿಕೊಂಡಿದ್ದೇವೆ, ತಮಗೂ ಕೂಡ ಕೇಳಿದ್ದೇವೆ, ಗವರ್ನರಗೂ ಕೂಡ ಕೊಟ್ಟಿದ್ದೇವೆ. ಆದರೆ ಆ ಒಂದು ಬರಗಾಲ ಪರಿಸ್ಥಿತಿ ಮೂಲೆಗೆ ಹೋಯಿತು. ಕೊನೆಗೆ ವೋಟ್ ಆಫ್ ಸೋ ಕಾನ್ಫಿಡೆನ್ಸ್ ಬಂದು ಅದು ಅಲ್ಲಿಂದಲ್ಲೇ ಉಳಿಯಿತು. ಆ ಮೂರು ದಿವಸ ಚರ್ಚೆಯಲ್ಲಿ ಕೂಡ ಈ ಪ್ರಸ್ತಾವನೆ ಬಂದಿಲ್ಲ. ವೋಟ್ ಆಫ್ ಸೋ ಕಾನ್ಫಿಡೆನ್ಸ್‌ನಲ್ಲೂ ಕೂಡ ಇದು ಬರಬೇಕಾದಂತಹ, ಪ್ರಾಶಸ್ತ್ಯ ಪಡೆಯಬೇಕಾದಂತಹದ್ದು ಇರಲಿಲ್ಲ. ಆದಕಾರಣ ಆ ಸಂದರ್ಭದಲ್ಲಿ ನಾನು ಮಾತನಾಡುವಾಗ ಅದರ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದೆ. ಆದರೆ ಸರ್ಕಾರದ ವತಿಯಿಂದ ಡಿಟೇಲ್ ಸ್ಟೇಟ್‌ಮೆಂಟ್ ಇಲ್ಲದ ಕಾರಣ ಮತ್ತು ಅದರ ಬಗ್ಗೆ ಸರ್ಕಾರ ಒಂದು ಸವಿಸ್ತಾರವಾದ ಹೇಳಿಕೆ ಕೊಡಬೇಕಾಗಿತ್ತು. ಅವರು ಎಷ್ಟು ಕೆಲಸ ಕಾರ್ಯಗಳನ್ನು ತೆಗೆದುಕೊಂಡಿದ್ದರೆ, ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ, ಎಷ್ಟು ಹಣ ಕೇಂದ್ರ ಸರ್ಕಾರದಿಂದ ತಂದಿದ್ದಾರೆ ಅವರು ಮೆಮೊರಂಡಂ ಕೊಟ್ಟಿದ್ದು ಏನಾಯಿತು ಎನ್ನುವುದರ ಬಗ್ಗೆ ಒಂದು ಮಾಹಿತಿಯನ್ನು ಕೊಟ್ಟು ಚರ್ಚೆ ಪ್ರಾರಂಭ ಮಾಡುತ್ತಾರೆ ಎಂದು ಹೇಳಿದರೆ ಅದು ಕೂಡ ಇವ್ಹೊತ್ತಿನ ದಿವಸ ಆಗಲಿಲ್ಲ.

ಮತ್ತು ಇವ್ಹೊತ್ತು ನಮ್ಮ ಅಜೆಂಡಾದಲ್ಲೂ ಕೆಳಗಡೆ ಆಫ್ ಆಯನ್ ಹವರ್ ಡಿಸ್‌ಕಶನ್ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ತಾವು ಹಾಕಿದಿರಿ. ಒಂದು ವೇಳೆ ತಾವು ಅದನ್ನು ತೆಗೆದುಕೊಳ್ಳಬೇಕು ಎಂದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಇದು ಪ್ರಸ್ತಾಪ ಮಾಡಿ ನಾವು ಅದರ ಬಗ್ಗೆ ಕೇಳಿದ್ದೇವೆ. ಅದಕ್ಕಾಗಿ ನೀವು ಬೇಕಾದರೆ ಅದನ್ನು ನಾಳೆ ತೆಗೆದುಕೊಳ್ಳಿ Immediately after the question hour ಅದೂ ಬರಗಾಲದ ಬಗ್ಗೆಯೇ ತಾವು ತೆಗೆದುಕೊಳ್ಳಬೇಕು ಮತ್ತು ನಾವೆಲ್ಲರೂ ಕೂಡ ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಸಿದ್ಧರಿದ್ದೇವೆ ಮತ್ತು ಸರ್ಕಾರದ ವತಿಯಿಂದ ಮೊದಲನೆಯದಾಗಿ ಒಂದು ಸ್ಟೇಟ್‌ಮೆಂಟ್ ಕೊಡಿಸಬೇಕು. ಇದು ಮೊದಲಿನಿಂದ ನಡೆದುಕೊಂಡು ಬಂದಿದ್ದು. ಈ ಮನೆಯಲ್ಲಿ ಯಾವಾಗಲೂ ಇಂಥ ಗಂಭೀರ ಪರಿಸ್ಥಿತಿಯಿದ್ದು ಬರಗಾಲ ಪರಿಸ್ಥಿತಿ ಬಂದಾ ಡ್ರಾಟ್ ಸಿಚ್ಯುಯೇಶನ್ ಪ್ರಿವೇಯ್‌ಲಿಂಗ್ ಇದ್ದಾಗ ಈ ರಾಜ್ಯದಲ್ಲಿ ಸ್ಥಿತಿಗತಿ ಏನಿದೆ ಎಂದು ಅದರ ಮೇಲೆ ಇಡೀ ಸದನದಲ್ಲಿ ಚರ್ಚೆ ಮಾಡುತ್ತಾರೆ. ಆದುದರಿಂದ ದಯವಿಟ್ಟು ತಾವು ಅದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ಏಕೆಂದರೆ ನಮ್ಮ ಮಾನ್ಯ ಶಿವಕುಮಾರ್‌ರವರು ಈಗಾಗಲೇ ಕೇಳಿದರು, ಬಹಳ ಕುತೂಹಲದಿಂದ ನಾವೆಲ್ಲರೂ ಕೂಡ ಇವ್ಹೊತ್ತು ಇಲ್ಲಿ ಈ ಸೇರಿದ್ದೇವೆ. ಅದು ಏನು ಎನ್ನತಕ್ಕಂಥದ್ದರ ಬಗ್ಗೆ ಕೂಡ ತಾವು ಹೇಳಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ : ನಾವು ನಿಲುವಳಿ ಸೂಚನೆಯನ್ನು ಈಗಾಗಲೇ ಕೊಟ್ಟಿದ್ದೇವೆ. ಅದರ ಬಗ್ಗೆ ತಾವು ಹೇಳಬೇಕು.

ಅಧ್ಯಕ್ಷರು : ತಮ್ಮ ನಾಯಕರು ಈಗಾಗಲೇ ಹೇಳಿದ್ದಾರೆ. ಸನ್ಮಾನ್ಯ ಬಂಗಾರಪ್ಪನವರ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಶಾಸನಸಭಾ ಅಧಿವೇಶನ ಸೇರತಕ್ಕಂಥ ಉದ್ದೇಶ ಏನು ಎನ್ನತಕ್ಕಂಥದ್ದು ತಮಗೆಲ್ಲರಿಗೂ ಗೊತ್ತಿರತಕ್ಕಂಥದ್ದು. ಹತ್ತೆಂಟು ಹಲವಾರು ವಿಷಯಗಳು ಚರ್ಚೆಯಾಗತಕ್ಕಂಥ ವೇದಿಕೆ. ಜರೂರಾತಿಗೆ ಮಹತ್ವ ಕೊಟ್ಟು ಬರಗಾಲ ಮತ್ತು ಇತ್ಯಾದಿ ವಿಷಯಗಳನ್ನು ತೆಗೆದುಕೊಳ್ಳತಕ್ಕಂಥ ಸಂದರ್ಭವನ್ನು ನಾವು ಇಲ್ಲಿ ಸದುಪಯೋಗಪಡಿಸಿಕೊಳ್ಳಬೇಕು. ಆ ಮಾತಿಗೆ ಮತ್ತೊಂದು

ಅಭಿಪ್ರಾಯ ವಿಭಿನ್ನವಾದುದನ್ನು ನಾವು ಯಾರೂ ಹೊಂದಿಲ್ಲ. ಸದನದ ಎಲ್ಲಾ ಮೂಲೆಯವರದ್ದೂ ಕೂಡ ಅದೇ ಅಭಿಪ್ರಾಯ ಇದೆಯೆಂದು ನಾನು ಭಾವಿಸಿದ್ದೇನೆ. ಕಳೆದ ಸಾರಿ ನಾವು ಸೇರಿದಾಗ ಕೂಡ ಅಂದರೆ ಮೊನ್ನೆ ಏಳುವುದಕ್ಕೆ ಮುಂದೆ ಅದರ ಬಗ್ಗೆ ಪ್ರತ್ಯೇಕವಾಗಿ ತಾವು ಕಾಲವನ್ನು ನಿಗದಿ ಮಾಡಿಕೊಡುತ್ತೀರಿ ಎನ್ನತಕ್ಕಂಥ ಮಾತು, ಅದಕ್ಕೆ ಸರ್ಕಾರದವರೂ ಕೂಡ ಒಪ್ಪಿಗೆ ಕೊಟ್ಟಿರತಕ್ಕಂಥದ್ದು. ಚರ್ಚೆಗೆ ಅವಕಾಶವನ್ನು ತಾವು ಎಂದು ಮಾಡಿಕೊಡುತ್ತೀರಿ ಎಂಬ ವಿಚಾರವನ್ನು ನಾವು ತಮ್ಮ ಹತ್ತಿರ ಮಾತನಾಡುವುದನ್ನು ಬಿಟ್ಟರೆ ಬೇರೆಯವರು ಅಡ್ಜರ್‌ನಮೆಂಟ್ ಮೋಷನ್ ಕೊಡಬಾರದು, ಅವರಿಗೆ ಹಕ್ಕಿಲ್ಲ ಎನ್ನತಕ್ಕಂಥ ಮಾತನ್ನು ನಾನು ಆಡುತ್ತಿಲ್ಲ. It is left to them. ಆದರೆ ತೀರ್ಮಾನವಾಗಿರತಕ್ಕಂಥ ವಿಷಯ ಅದು ಇಲ್ಲಿ ಚರ್ಚೆಯಾಗಬೇಕು ಎನ್ನತಕ್ಕಂಥದ್ದು, ಅದು ಸರ್ಕಾರವು ಕೂಡ ಸದನದ ಕಾರ್ಯಕಲಾಪದ ಸಮಿತಿ ಸಭೆಯಲ್ಲಿ ಕೂಡ ಒಪ್ಪಿಗೆ ಕೊಟ್ಟಿರತಕ್ಕಂಥ ವಿಷಯ, ತಾವು ಒಪ್ಪುತ್ತೀರೆಂದು ನಾನು ಭಾವಿಸಿಕೊಳ್ಳುತ್ತೇನೆ. ಈ ಮಧ್ಯೆ ಅದನ್ನು ತಾವು ಯಾವಾಗ ನಿಗದಿ ಮಾಡುತ್ತೀರಿ ಎನ್ನತಕ್ಕಂಥದ್ದು ತಮ್ಮ ಅಂತಿಮ ತೀರ್ಪಿಗೆ ಬಿಟ್ಟದ್ದು. ತಾವು ಆ ತೀರ್ಪನ್ನು ಕೊಟ್ಟರೆ ನಾವು ಅದೇ ರೀತಿ ಸದನದಲ್ಲಿ ನಮ್ಮ ನಡವಳಿಕೆಯನ್ನು ನಡೆಸಿಕೊಳ್ಳುತ್ತೇವೆ. ಬರಗಾಲದ ವಿಚಾರ, ಅದು ಗಂಭೀರವಾಗಿ ಚರ್ಚೆ ಮಾಡತಕ್ಕಂಥ ವಿಚಾರ. ಈ ಮಧ್ಯೆ ಕೆಲವು ನಿರ್ಣಯಗಳು ಇಲ್ಲಿ ನಾವು ಕಳುಹಿಸಿಕೊಟ್ಟಿರುವುದು. ನಮಗೆ ಗೊತ್ತಿರುವ ಹಾಗೆ ಮೊಟ್ಟಮೊದಲನೆದಾಗಿ ಸಿ.ಪಿ.ಎಂ.ನ ಮಾನ್ಯ ಶ್ರೀರಾಮ ರೆಡ್ಡಿಯವರು ಕಳುಹಿಸಿಕೊಟ್ಟಿದ್ದಾರೆ. ಆಮೇಲೆ ದಳದ ಶ್ರೀಮಾನ್ ನಾಗೇಗೌಡರು ಕಳುಹಿಸಿಕೊಟ್ಟಿದ್ದಾರೆ, ನಮ್ಮ ಪಕ್ಷದ ವತಿಯಿಂದ ನಾವು ಕಳುಹಿಸಿಕೊಟ್ಟಿದ್ದೇವೆ. ಕಾಂಗ್ರೆಸ್ 'ಐ' ಪಕ್ಷದ ವತಿಯಿಂದ ಕೂಡ ಕಳುಹಿಸಿಕೊಟ್ಟಿದ್ದಾರೆ ಎಂಬತಕ್ಕಂಥ ಮಾತನ್ನು ಈಗಾಗಲೇ ಕೇಳಿದ್ದೇನೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಪಾಯಿಂಟ್ ಆಫ್ ಆರ್ಡರ್...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಬೇರೆ ವಿಷಯ ಪ್ರಸ್ತಾಪ ಆಗುತ್ತಿರುವುದರಿಂದ ನಾನು ಯಾವ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂಬುದನ್ನು ತಮಗೆ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಬೈ ಪ್ರೊಸೀಜರ್ ಕಲಾಪದ ವಿಚಾರ ಮಾತನಾಡುತ್ತಿದ್ದೇನೆಯೇ ಹೊರತು ಸಬ್ಜೆಕ್ಟ್ ಯಾವುದೂ ಮಾತನಾಡುತ್ತಿಲ್ಲ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಪಾಯಿಂಟ್ ಆಫ್ ಆರ್ಡರ್ ಏನು ಎನ್ನುವುದನ್ನು ಹೇಳುತ್ತಾರೆ, ಹೇಳುವುದಕ್ಕೆ ಪ್ರಮೇಯ ಇಲ್ಲ ಅಂದರೆ, ಹೇಳಿ.

(ಗೊಂದಲ)

ಶ್ರೀ ಜಿ.ಬಿ. ಶಿವಕುಮಾರ್ : ನೀವು ಹೇಳಿರುವುದಕ್ಕೇ ಅವರು ಹೇಳಿರುವುದು, ನೀವು ಏನು ಹೇಳಿದ್ದೀರಿ ಎನ್ನುವುದನ್ನು ಅವರು ಓದುತ್ತಾರೆ ಕೇಳಿ. ನೀವು ಏನು ಹೇಳಿದ್ದೀರಿ ಅಂತ ಅವರು ಓದುತ್ತಾರೆ ಕೇಳಿ. ನೀವು ಏನೂ ಮಾತನಾಡಬೇಡಿ. ಅವರಿಗೆ ಅವರ ನೋವು ಇದೆ, ಅವರು ಮಾತನಾಡುತ್ತಾರೆ, ಅವರು ಮಾತನಾಡಲಿಕ್ಕೆ ಬಿಡಿ. ಏನು ಪಾಯಿಂಟ್ ಆಫ್ ಆರ್ಡರ್, ಪಾಯಿಂಟ್ ಆಫ್ ಆರ್ಡರ್...

(ಗೊಂದಲ)

Sri S. Bangarappa : I have not yielded. I will not yield unless you direct me.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಪಾಯಿಂಟ್ ಆಫ್ ಆರ್ಡರ್ ಇದೆ. ಅದೇನು ಅಂತ ಅಂದರೆ ಒಂದು ಸಾರಿ ತಾವು ಬೇರೆ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಮುಂಚೆ, ನಾನೇನೋ ಒಂದು ಗಂಭೀರವಾದಂಥ ವಿಷಯದ ಬಗ್ಗೆ ನಮ್ಮ ನಿಲುವಳಿ ಸೂಚನೆಯನ್ನು ಇಲ್ಲಿ ನಾನು ನಿಂತು ಕಳುಹಿಸಿ ಕೊಟ್ಟಿದ್ದೇನೆ. ಆ ನಿಲುವಳಿ ಸೂಚನೆಗೆ ಅವಕಾಶವಿಲ್ಲ, ನಾನು '69' ನಿಯಮದ ಪ್ರಕಾರ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ ಅಂದರೆ, ತುಂಬಾ ಪ್ರಮುಖವಾಗಿರತಕ್ಕಂಥ ವಿಷಯವಾದ್ದರಿಂದ ವ್ಯಾಪಕವಾಗಿ ಚರ್ಚೆ ಆಗಬೇಕಾಗಿರುವುದರಿಂದ ಸದನದ ಆ ಕಡೆ ಈ ಕಡೆ ಇರುವವರು ಈ ಒಂದು ಗಂಭೀರವಾದಂಥ ಭೀಕರ ಬರಗಾಲದ ಬಗ್ಗೆ ಚರ್ಚೆ ಮಾಡಬೇಕಾಗಿರುವುದರಿಂದ ನಾನು ಕಳುಹಿಸಿರುವಂಥ ಆ ಒಂದು ನೋಟಿಸ್ ಏನಾಗಿದೆ? ಅದರ ಬಗ್ಗೆ ತಾವು ಒಂದು ತೀರ್ಮಾನವನ್ನು ಕೊಡಬೇಕು. ಅದೇ ನನ್ನ ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಅಧ್ಯಕ್ಷರು : ನಾನು ಸದಸ್ಯರುಗಳ ಗಮನಕ್ಕೆ ತರುವ ವಿಷಯವೇನೆಂದರೆ, ಇನ್ನೊಬ್ಬರ ವಾದವನ್ನು ಕೇಳಿಯಾದ ಮೇಲೆ ನಿಮ್ಮ ಅಭಿಪ್ರಾಯ ಏನು ಎಂದು ಹೇಳಿ, ಈಗ ಅವರು ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ತಾವು ಒಪ್ಪುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಾಗ ಅದರ ಬಗ್ಗೆ ತಾವು ರೂಲಿಂಗ್ ಕೊಡುವುದಕ್ಕೆ ಮುಂಚೆ ಬೇರೆ ವಿಷಯಗಳು ಪ್ರಸ್ತಾಪ ಆದರೆ ಇದಕ್ಕೆ ಪ್ರಾಧಾನ್ಯತೆ ಕೊಟ್ಟು ತೀರ್ಮಾನವನ್ನು ತಾವು ಕೊಡಬೇಕೋ ಅದು ಆಗದೇ, ನಾನು ಸಮಯಕ್ಕೆ ಸರಿಯಾಗಿ ನನ್ನ ವಿಚಾರವನ್ನು ಪ್ರತಿಪಾದನೆ ಮಾಡಲಿಲ್ಲ, ತಮ್ಮ ಗಮನಕ್ಕೆ ತರಲಿಲ್ಲ ಎನ್ನತಕ್ಕಂಥ ಆಪಾದನೆಗೆ ಗುರಿಯಾಗಬಾರದು ಎಂದು ಹೇಳಿ ರಾಜ್ಯದಲ್ಲಿರುವ ಭೀಕರ ಬರಗಾಲದ ಬಗ್ಗೆ ನಾನು ತಮಗೆ ನೋಟಿಸ್ ಕಳುಹಿಸಿಕೊಟ್ಟಿದ್ದೇನೆ. ಅದಕ್ಕೆ ಗಮನ ಕೊಟ್ಟು ಅದಕ್ಕೆ ಆದ್ಯತೆಯನ್ನು ಕೊಟ್ಟು, ಚರ್ಚೆಗೆ ಅವಕಾಶ ಮಾಡಿಕೊಟ್ಟ ಮೇಲೆ ಬೇರೆ ವಿಷಯಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವುದೇ ನನ್ನ ಪಾಯಿಂಟ್ ಆಫ್ ಆರ್ಡರ್. ಬೇರೆ ವಿಷಯಕ್ಕೆ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಇದಕ್ಕೆ ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ಮತ್ತೆ ಅವಕಾಶ ಮಾಡಿಕೊಡುತ್ತೇನೆ ಎಂದು ನೀವು ಹೇಳಿದರೆ ನಾನು ಕುಳಿತುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಇಷ್ಟೇ ನನ್ನ ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು : ಸದನದ ನಿಯಮಾವಳಿಗನುಸಾರವಾಗಿ ನಿಲುವಳಿ ಸೂಚನೆಗಾಗಿ ತಾವು ನಮ್ಮ ಕಛೇರಿಗೆ ಅಗತ್ಯ ಮಾಹಿತಿಗಳನ್ನು ಒದಗಿಸಿದ್ದೀರಿ. ನಿಜ, ಅದರಲ್ಲಿ ಎರಡು ಅಭಿಪ್ರಾಯಗಳಿಲ್ಲ. ಬರಗಾಲದ ವಿಚಾರ ಚರ್ಚೆ ಮಾಡಬೇಕು ಎನ್ನತಕ್ಕಂಥ ಒಂದು ಆಸಕ್ತಿ ಉತ್ಸಾಹ, ಕುತೂಹಲ ಸದನದ ಎಲ್ಲಾ ಗೌರವಾನ್ವಿತ ಸದಸ್ಯರಿಗೂ ಇದೆ. ಆ ಕಾರಣಕ್ಕಾಗಿಯೇ ಎಲ್ಲರೂ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿರುವುದರಿಂದ ನಿಯಮ '69' ರ ಕೆಳಗಡೆ ತೆಗೆದುಕೊಂಡು ಎಲ್ಲರಿಗೂ ಅವಕಾಶ ಮಾಡಿಕೊಡಬೇಕು, ನಿಲುವಳಿ ಸೂಚನೆ ಅಗತ್ಯ ಇಲ್ಲ ಎನ್ನತಕ್ಕಂಥ ತೀರ್ಮಾನಕ್ಕೆ ಅಧ್ಯಕ್ಷರ ಕಛೇರಿಗೆ ಬಂದು ಈ ಒಂದು ನಿರ್ಣಯವನ್ನು ನಾವು ಮಾಡಿದ್ದೇವೆ. ಆದ್ದರಿಂದ ಬರಗಾಲದ ಪ್ರಸ್ತಾಪ ಏನಿದೆ ಅದನ್ನು ನಿಯಮ '69'

ರ ಕೆಳಗಡೆ ತೆಗೆದುಕೊಂಡಿದ್ದೇವೆ. ಈ ಬಂಗಾರಪ್ಪನವರು ಮುಂದುವರೆಸಿ, without going into the details.

+ Sri S. Bangarappa : Yes, I know. ಮಾನ್ಯ ಸಭಾಧ್ಯಕ್ಷರೇ, ನಾನು ತಮಗೆ ಮೊಟ್ಟ ಮೊದಲನೆಯದಾಗಿ ಅಭಿನಂದಿಸುತ್ತೇನೆ. ಏಕೆಂದರೆ ತಾವು ಬರಗಾಲದ ವಿಷಯದ ಚರ್ಚೆಗೆ ಅವಕಾಶವನ್ನು ಮತ್ತೊಂದು ನಿಯಮಾವಳಿ ಪ್ರಕಾರ ತಾವು ಮಾಡಿಕೊಟ್ಟಿದ್ದೀರಿ. ನಾನು ಹೇಳುತ್ತಿದ್ದೆ, ನಿರ್ಣಯವನ್ನು ಬೇರೆ ವಿಷಯದ ಬಗ್ಗೆ, ಅಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ನಿರ್ಣಯವನ್ನು ಕಳುಹಿಸಿಕೊಟ್ಟಿರುವುದಕ್ಕೆ ಸಂಬಂಧಪಟ್ಟ ಹಾಗೆ ಮಾತ್ರ ಪ್ರಸ್ತಾಪ ಮಾಡುತ್ತಿದ್ದೇನೆ, ನಾನು ವಿಷಯಕ್ಕೆ ಹೋಗುವುದಿಲ್ಲ. ಅದು ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ತಾವು ಯಾವ ರೀತಿ ನಮಗೆ ಆದೇಶ ಕೊಡುತ್ತೀರೋ ನಾವು ಆ ರೀತಿ ನಮ್ಮ ನಡವಳಿಕೆಯನ್ನು ಇಟ್ಟುಕೊಳ್ಳುತ್ತೇವೆ. ಪತ್ರಿಕೆಯಲ್ಲಿ ಬಂತು, ತಾವು ರೂಲಿಂಗ್ ಕೊಟ್ಟ ಮೇಲೆ ಕ್ಯಾಸೆಟ್ ಇತ್ಯಾದಿ ವಿಚಾರಗಳಲ್ಲಿ ನಾನು ವಿವರಕ್ಕೆ ಹೋಗುವುದಿಲ್ಲ. ಪತ್ರಿಕೆಯಲ್ಲಿ ಬಂದಮೇಲೆ ಅವರು ಆಡಿರತಕ್ಕಂಥ ಮಾತಿನ ವಿಚಾರದಲ್ಲಿ ಈಗಾಗಲೇ ನಾವು ಹಕ್ಕು-ಬಾಧ್ಯತಾ ನಿರ್ಣಯವನ್ನು ತಮ್ಮ ಒಪ್ಪಿಗೆಗಾಗಿ ಈ ಸದನದಲ್ಲಿ ಚರ್ಚೆ ಆಗುವುದಕ್ಕೋಸ್ಕರ ಅಂತಿಮ ತೀರ್ಪನ್ನು ಪಡೆಯುವುದಕ್ಕೋಸ್ಕರ ನಾವು ಕಳುಹಿಸಿಕೊಟ್ಟಿದ್ದೇವೆ. ಈಗಾಗಲೇ ಯಾರು ಕಳುಹಿಸಿದ್ದರೆ ಎನ್ನುವ ಮಾತನ್ನು ಕೂಡ ನನು ಹೇಳಿದ್ದೇನೆ. ಸುಮಾರು 3Ë4 ನಿರ್ಣಯಗಳು ಈಗ ತಮ್ಮ ಎದುರಿಗಿದೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇನೇ. ನಾವು ಈ ಸದನದಲ್ಲಿ ಕುಳಿತು ಚರ್ಚೆ ಮಾಡತಕ್ಕಂಥ ಕಾಲದಲ್ಲಿ, ಅಬಿಪ್ರಾಯ ವ್ಯಕ್ತಪಡಿಸತಕ್ಕಂಥ ಕಾಲದಲ್ಲಿ, ಒಬ್ಬರಿಗೊಬ್ಬರಿಗೆ ಗೌರವ ಘನತೆ ಕೊಟ್ಟು ಸದನದ ಗೌರವಗಳನ್ನೂ ಕೂಡ ಕಾಪಾಡತಕ್ಕಂಥ ವಿಷಯಗಳು ಅಡಗಿರುವುದರಿಂದ ಆ ವಿಷಯಕ್ಕೆ ಆದ್ಯತೆಯನ್ನು ಕೊಟ್ಟು ಚರ್ಚೆಗೆ ಈ ಸದನದಲ್ಲಿ ಮೊದಲು ತೆಗೆದುಕೊಳ್ಳಬೇಕು ಎನ್ನತಕ್ಕಂಥ ವಿಚಾರದಿಂದ ನಾವು ಕಳುಹಿಸಿಕೊಟ್ಟಿದ್ದೇವೆ. ತಮ್ಮ ಅಪ್ಪಣೆಯನ್ನು ಪಡೆದು ಈ ಸದನದಲ್ಲಿರತಕ್ಕ ಎಲ್ಲಾ ಮಾನ್ಯ ಸದಸ್ಯರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಚಾರದ ಬಗ್ಗೆ ಇವತ್ತು ಬೆಳಿಗ್ಗೆಯೇ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡತಕ್ಕ ಸಂದರ್ಭ ಇತ್ತು. ನಮ್ಮ ಅನುಭವದ ಪ್ರಕಾರ ಕೆಲವು ಸಾರಿ ನಮ್ಮ ಸಂಸದೀಯ ಕಲಾಪಗಳಲ್ಲಿ ವ್ಯವಹಾರಗಳಲ್ಲಿ ಮಾತುಕತೆಗಳ ಮುಖಾಂತರ ಕೂಡ ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿದುಕೊಂಡು ತಮ್ಮ ಘನತೆ ಗೌರವ, ಸದನದ ಘನತೆ ಗೌರವ, ಎಲ್ಲಾ ರಾಜಕೀಯ ಪಕ್ಷಗಳ ಸದಸ್ಯರ ಅಂದರೆ ಬಿ.ಜೆ.ಪಿ.ಯನ್ನೂ ಒಳಗೊಂಡಂತೆ ನಾನು ಮಾತನಾಡುತ್ತಿದ್ದೇನೆ, ಅವರ ಘನತೆ ಗೌರವಗಳನ್ನು ಯಾವರೀತಿ ಕಾಪಡಿಕೊಂಡು ಹೋಗಬೇಕೆಂಬುದನ್ನು ಯೋಚನೆ ಮಾಡಬೇಕು. ಹಾಗೆ ಅವರ ಘನತೆ ಗೌರವವನ್ನು ಕಾಪಾಡಿದರೆ ನಮ್ಮ ಗೌರವವನ್ನು ನಾವೇ ಕಾಪಾಡಿಕೊಂಡಂತೆ ಎಂಬ ಸದ್ಭಾವನೆಯಿಂದ ನಾವು ಬೇರೆಯವರಿಂದ ಏನು ನಿರೀಕ್ಷೆ ಮಾಡುತ್ತೇವೆ, ಅದೇ ರೀತಿಯ ನಿರೀಕ್ಷಣೆಯನ್ನು ಬೇರೆಯವರೂ ನಮ್ಮಿಂದ ಮಾಡುತ್ತಾರೆಂಬ ಉದ್ದೇಶವನ್ನು ಇಟ್ಟುಕೊಂಡೇ ನಾವು ಚರ್ಚೆಯಲ್ಲಿ ಭಾಗವಹಿಸುತ್ತೇವೆ. ತಮ್ಮ ರೂಲಿಂಗ್ ಬಂದಮೇಲೆ ಅವರು ಹೊರಗಡೆ ಹೇಳಿಕೆಗಳನ್ನು ಕೊಟ್ಟಮೇಲೆ ಅವು ನಮ್ಮ ಮನಸ್ಸಿಗೆ ನೋವನ್ನು ತಂದಿವೆ. ಸದನದ ನಿಯಮಾವಳಿಗಳನ್ನು ಮುರಿದಿವೆ; ಕಾನೂನುಗಳನ್ನು ಮುರಿದಿವೆ, ಇತ್ಯಾದಿ, ಇತ್ಯಾದಿ. ಆದರೆ ನಾನು ಅದರ ವಿವರಗಳಿಗೆ ಹೋಗುವುದಿಲ್ಲ. ಆದ್ದರಿಂದ ಮೊದಲು ನಮ್ಮ ಹಕ್ಕು ಬಾಧ್ಯತೆಯ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ. ಇವತ್ತು ಇಡೀ ದಿವಸದ ಸದನದ ಕಾರ್ಯಕಲಾಪಗಳನ್ನು ಈಗ ಸುಮಾರು 6.20ಕ್ಕೆ ಪ್ರಾರಂಭ ಮಾಡಿದ್ದೇವೆ. ಇದು ಬಹಳ ಮನಸ್ಸಿಗೆ ಬಹಳ ನೋವಾಗುತ್ತದೆ. ಏಕೆಂದರೆ ಇಡೀ ದಿವಸದ ಸದನದ ಕಾರ್ಯಕಲಾಪಗಳನ್ನು ಇವತ್ತು ಬೆಳಿಗ್ಗೆಯಿಂದ ಇದುವರೆಗೂ ಯಾವುದನ್ನೂ ಮಾಡದೆ ಇರುವುದು. ಇವತ್ತು ತಾವಂತೂ ಬಹಳ ಸಹನೆಯನ್ನು ಇಟ್ಟುಕೊಂಡು ನಮ್ಮೆಲ್ಲರನ್ನೂ ಕರೆದು ಮಾತುಕತೆ ಮಾಡಿರುವುದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಕೆಲವು ವಿಚಾರಗಳು ಆಗುತ್ತವೆ, ಹೋಗುತ್ತವೆ

ಇದು ಏನೇ ಇರಬಹುದು, ಇದೆಲ್ಲಾ ಇದ್ದೇ ಇರುತ್ತದೆ. ಆದರೆ ತಾವು ಎಲ್ಲಾ ರಾಜಕೀಯ ಪಕ್ಷದವರನ್ನೂ ಕರೆದು ಚರ್ಚೆ ಮಾಡಿರುವುದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಮಾನ್ಯ ಸಭಾನಾಯಕರು ಮತ್ತು ಈ ಕಡೆ ಇರತಕ್ಕ ಮಾನ್ಯ ವಿರೋಧಪಕ್ಷದ ನಾಯಕರು, ಅದೇ ರೀತಿ ಪಕ್ಷೇತರ ಮಾನ್ಯ ಸದಸ್ಯರುಗಳು, ಆಯಾ ಪಕ್ಷಗಳ ಮಾನ್ಯ ಸದಸ್ಯರುಗಳು ಬಹಳ ಸಹಕಾರವನ್ನು ಕೊಟ್ಟು ಅಭಿಮಾನದಿಂದ ಬಂದು ತಮ್ಮ ಪ್ರಯತ್ನವನ್ನು ಮಾಡಿದ್ದಾರೆ. ಅದರ ವಿವರಕ್ಕೆ ಈಗ ನಾನು ಹೋಗುವುದಿಲ್ಲ. ಏಕೆಂದರೆ ಅದರ ಫಲಿತಾಂಶವನ್ನು ಪ್ರಸ್ತಾಪ ಮಾಡತಕ್ಕ ಸಂದರ್ಭ ಇದಲ್ಲವಾದ್ದರಿಂದ ಇದನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡತಕ್ಕದ್ದು ಅಪ್ರಕೃತ ಎಂದು ಹೇಳಬಯಸುತ್ತೇನೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಹಕ್ಕುಬಾಧ್ಯತೆಯ ನಿರ್ಣಯದ ಚರ್ಚೆಯ ಬಗ್ಗೆ ತಾವು ಕೊಟ್ಟಿದ್ದೇವೆ, ಆ ಪೈಕಿ ಯಾರು ಮೊದಲು ಕೊಟ್ಟಿದ್ದಾರೆ ಅವರನ್ನು ತಾವು ಮೊದಲು ಕರೆಯಬೇಕು. ನನಗೆ ಗೊತ್ತಿರುವಂತೆ ಮಾನ್ಯ ಶ್ರೀರಾಮರೆಡ್ಡಿಯವರು ಮೊದಲು ಕೊಟ್ಟಿದ್ದಾರೆ. ತಮ್ಮ ನಿಯಮಾವಳಿಯ ಪ್ರಕಾರ ತಾವು ಯಾರನ್ನಾದರೂ ಕರೆಯಿರಿ. ಹಾಗೆ ಕರೆದು ವಿಷಯದ ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ವಿನಂತಿಯನ್ನು ನಿರ್ಣಯವನ್ನು ಕೊಟ್ಟಿರುವವರ ಪರವಾಗಿ ಹಾಗೂ ಸದನದ ಪರವಾಗಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಇದು ಈ ಸದನದ ಘನತೆ ಗೌರವ, ತಮ್ಮ ಸ್ಥಾನಮಾನದ ಘನತೆ ಗೌರವ, ಅದೇ ರೀತಿ ಮಾನ್ಯ ಸದಸ್ಯರ ಘನತೆ ಗೌರವಗಳೂ ಇದರಲ್ಲಿ ಒಳಗೊಂಡಿರುವುದರಿಂದ ಮತ್ತು ರಾಜಕೀಯ ಪಕ್ಷಗಳ ವಿಚಾರವೂ ಇದರಲ್ಲಿ ಇರುವುದರಿಂದ ದಯವಿಟ್ಟು ಇದಕ್ಕೆ ಆದ್ಯತೆಯನ್ನು ಕೊಟ್ಟು ಈ ನಿರ್ಣಯವನ್ನು ತಾವು ಚರ್ಚೆಗೆ ತೆಗೆದುಕೊಳ್ಳಬೇಕು ಮಾನ್ಯ ಸದಸ್ಯರನ್ನು ಚರ್ಚೆಗೆ ಕರೆಯಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದೊಂದು ವಿಶೇಷವಾದ ಪ್ರಸಂಗ. ಬಹುಶಃ ಈ ಸದನದ ಇತಿಹಾಸದಲ್ಲಿ ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿರಲಿಲ್ಲ. ನನಗಂತೂ ಮನಸ್ಸು ಬಹಳ ನೊಂದು ನಾನು ತಮ್ಮ ಮುಂದೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ಪ್ರಸಂಗಕ್ಕೆ ಒಂದು ತೆರೆಯನ್ನು ಎಳೆಯಬೇಕೆಂದು ನಾನು ಬಹಳ ಪ್ರಯತ್ನ ಪಟ್ಟೆ. ಸ್ವಲ್ಪ ಹೆಚ್ಚೂ ಕಡಿಮೆ ಕಳೆದ 3Ë4 ದಿನಗಳಿಂದ ಪ್ರಯತ್ನ ಮಾಡಿ ಇದು ಒಂದು ರೀತಿಯ ತಿಳಿ ವಾತಾವರಣಕ್ಕೆ ಬರಬೇಕು. ಇಲ್ಲಿ ಇನ್ನೂ ಅನೇಕ ವಿಷಯಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಇದನ್ನೇ ಮುಂದುವರೆಸಿಕೊಂಡು ಹೋದರೆ ಬಹಳ ಪ್ರಮುಖವಾದ ಚರ್ಚೆಗಳು ಬೇರೆ ದಿಕ್ಕನ್ನು ತಲುಪುತ್ತದೆಂದು ಯೋಚಿಸಿ, ಇದನ್ನು ಏನಾದರೂ ಮಾಡಿ ಶಮನ ಮಾಡಿ ಒಂದು ಅಂತಿಮ ತೀರ್ಮಾನಕ್ಕೆ ಬರಬೇಕೆಂದು ಸಂಪೂರ್ಣ ಪ್ರಯತ್ನವನ್ನು ನಾನು ಮಾಡಿದ್ದಾಯಿತು. ತಮ್ಮ ಔದಾರ್ಯ ಮತ್ತು ತಾವು ತೆಗೆದುಕೊಂಡ ವಿಚಾರದ ಬಗ್ಗೆ ಈ ಸದನದಲ್ಲಿ ತಮಗೆ ಅಭಿನಂದನೆಯನ್ನು ನಾನು ಸಲ್ಲಿಸಬೇಕಾಗಿದೆ. ತಮ್ಮ ಸ್ಥಾನ ಬಹಳ ದೊಡ್ಡದು. ತಮ್ಮ ಸ್ಥಾನದ ಗೌರವ ಬಹಳ ದೊಡ್ಡದು. ತಮ್ಮ ಸ್ಥಾನದ ಗೌರವವನ್ನು ಎತ್ತಿ ಹಿಡಿಯಬೇಕಾದುದು ನಮ್ಮೆಲ್ಲರ ಆದ ಕರ್ತವ್ಯ. ಈ ಸ್ಥಾನಕ್ಕಾಗಲಿ, ಅಥವಾ ಆ ಸ್ಥಾನದಲ್ಲಿರತಕ್ಕ ತಮದಾಗಲಿ ಕಿಂಚಿತ್ ಅಗೌರವವಾದರೂ ಅದು ಇಡೀ ಸದನಕ್ಕೆ ಅಗೌರವ ಎನ್ನತಕ್ಕ ಮಾತನ್ನು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಆದರೆ ಯಾರು ಈ ಸ್ಥಾನಕ್ಕೆ ಅಗೌರವವಾಗತಕ್ಕ ಪದಗಳನ್ನು ಆಡಿದ್ದಾರೆ. ಅವರು ಪ್ರಾಮಾಣಿಕವಾಗಿ, ಬೇಷರತ್ ಆಗಿ ಕ್ಷಮಾಪಣೆಯನ್ನು ಕೇಳಬೇಕಾದದು ಅವರ ಕರ್ತವ್ಯ. ಆ ಪ್ರಶ್ನೆ ಬೇರೆ. ಅದು ಅವರಿಗೆ ಸೇರಿದ್ದುದು. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಪ್ರಶ್ನೆ ಎಂದರೆ ಇವತ್ತು ನಾವು ಬೆಳಿಗ್ಗೆ 10 ಗಂಟೆಗೆ ಇಲ್ಲಿಗೆ ಬಂದು ಇಲ್ಲಿಯವರೆಗೂ ಏನಾಯಿತೆಂಬುದು ಈ ರಾಜ್ಯದ ಜನತೆಗೂ